**<u>ದಿನಾಂಕಃ 04.04.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಾದ ಶ್ರೀ.MM ರವರಿಂದಃ</u>**

1) ಯಾವ ಅಪಘಾತದಲ್ಲಿ ನನ್ನ ಗಂಡನು ಮರಣ ಹೊಂದಿದ್ದಾರೋ ಸದರಿ ಅಪಘಾತವು ದಿಃ **20.02.2025** ರಂದು ಸಂಭವಿಸಿದೆ. ಸದರಿ ಅಪಘಾತದ ಸಂಬಂಧವಾಗಿ ಪೋಲಿಸರಿಗೆ ಫಿರ್ಯಾದನ್ನು ನಾನೇ ಕೊಟ್ಟಿದ್ದೇನೆ. ಯಾವ ಅಪಘಾತದಲ್ಲಿ ನನ್ನ ಗಂಡನು ಮರಣ ಹೊಂದಿದ್ದಾರೋ ಸದರಿ ಅಪಘಾತವನ್ನು ನಾನು ನೋಡಿರುವುದಿಲ್ಲ.

2) ಅಪಘಾತವನ್ನು ನೋಡಿದಂತಹ ಯಾರೋ ಸಾರ್ವಜನಿಕರು ನನಗೆ ದೂರವಾಣಿ ಕರೆ ಮಾಡಿ ಅಪಘಾತದ ವಿಷಯವನ್ನು ತಿಳಿಸಿದ್ದಾರೆ. ಆದರೆ ಆ ವ್ಯಕ್ತಿಯ ಹೆಸರು ನನಗೆ ತಿಳಿದಿಲ್ಲ ಮತ್ತು ಸದರಿ ವ್ಯಕ್ತಿಯ ದೂರವಾಣಿ ಸಂಖ್ಯೆಯನ್ನು ನಾನು ಎಲ್ಲಿಯೂ ಬರೆದಿಟ್ಟುಕೊಂಡಿಲ್ಲ.

3) ಅಪಘಾತದ ಸಮಯದಲ್ಲಿ ನನ್ನ ಗಂಡನು ಚಾಲನೆ ಮಾಡುತ್ತಿದ್ದಂತಹ ದ್ವಿಚಕ್ರ ವಾಹನದ ಸಂಖ್ಯೆಯನ್ನು ಹೇಳಲು ನೆನಪಿಲ್ಲ, ಆದರೆ ಸದರಿ ದ್ವಿಚಕ್ರ ವಾಹನವು ನನ್ನ ಗಂಡನಿಗೆ ಸೇರಿದ ವಾಹನ ಆಗಿದೆ ಆದರೆ ಆ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ.

4) ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ಅನುಮತಿ ನೀಡುವಂತಹ ಚಾಲನಾ ಪರವಾನಗಿಯು ನನ್ನ ಗಂಡನ ಬಳಿ ಇತ್ತು ಆದರೆ ಚಾಲನಾ ಪರವಾನಗಿಯನ್ನು ನಾನು ಹಾಜರುಪಡಿಸಿರುವುದಿಲ್ಲ.

5) ಅಪಘಾತದ ಸಮಯದಲ್ಲಿ ನನ್ನ ಗಂಡನು ಚಾಲನೆ ಮಾಡುತ್ತಿದ್ದಂತಹ ದ್ವಿಚಕ್ರ ವಾಹನಕ್ಕೆ ವಿಮಾ ಪಾಲಿಸಿಯನ್ನು ಪಡೆದುಕೊಳ್ಳಲಾಗಿತ್ತೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಮತ್ತು ಆ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ನನ್ನ ಗಂಡನ ಚಾಲನಾ ಪರವಾನಗಿಯ ಮತ್ತು ಸದರಿ ದ್ವಿಚಕ್ರ ವಾಹನದ ವಿಮಾ ಪಾಲಿಸಿಯ ಧೃಡೀಕೃತ ನಕಲುಗಳನ್ನು ಸಂಬಂಧಪಟ್ಟ ಕಚೇರಿಯಿಂದ ಪಡೆದುಕೊಂಡು ಹಾಜರುಪಡಿಸಲು ಸಾಧ್ಯ ಇದೆಯೋ ಹೇಗೆ ಎಂದರೆ ಅದೆಲ್ಲಾ ನನಗೆ ಗೊತ್ತಾಗುವುದಿಲ್ಲ.

6) ನನ್ನ ಗಂಡನ ಬಳಿ ಚಾಲನಾ ಪರವಾನಗಿ ಇರಲಿಲ್ಲ ಮತ್ತು ಆ ಬಗ್ಗೆ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

7) ನನ್ನ ಗಂಡನು **2** ನೇ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದರು. ನನ್ನ ಗಂಡನ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ನನ್ನ ಗಂಡನ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ

ದಾಖಲೆಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದುಕೊಂಡು ಹಾಜರುಪಡಿಸಲು ಸಾಧ್ಯ ಇದೆಯೋ ಹೇಗೆ ಎಂದರೆ ಅದೆಲ್ಲಾ ನನಗೆ ಗೊತ್ತಾಗುವುದಿಲ್ಲ.

8) ನನ್ನ ಮೊದಲನೇ ಮಗಳು ದ್ವಿತೀಯ ಪಿಯುಸಿಯಲ್ಲಿ ಮತ್ತು ಎರಡನೇ ಮಗಳು ಪ್ರಥಮ ಪಿಯುಸಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನನ್ನ ಮಕ್ಕಳ ವಿದ್ಯಾಭ್ಯಾಸದ ಸಂಬಂಧವಾಗಿ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

9) ಅಪಘಾತದ ಸ್ಥಳಕ್ಕೆ ನಾನು ಭೇಟಿ ಕೊಟ್ಟಿರುವುದಿಲ್ಲ.

10) ಅಪಘಾತದ ಸಮಯದಲ್ಲಿ ನನ್ನ ಗಂಡನು ಹೆಲ್ಮೆಟ್ ಹಾಕಿಕೊಂಡಿರಲಿಲ್ಲ ಎಂದರೆ ಸುಳ್ಳು. ಅಪಘಾತದ ಸಮಯದಲ್ಲಿ ನನ್ನ ಗಂಡನು ಹೆಲ್ಮೆಟ್ ಹಾಕಿಕೊಂಡಿದ್ದರು ಎಂಬುದಾಗಿ ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ. ನಾನು ಪೋಲಿಸರಿಗೆ ನೀಡಿರುವಂತಹ ಹೇಳಿಕೆಯ ನಕಲನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ.

11) ಕೆಎ-**07**-ಇಜಿ-**6793** ಸಂಖ್ಯೆಯ ದ್ವಿಚಕ್ರ ವಾಹನದ ಚಾಲಕನು ಸದರಿ ವಾಹನವನ್ನು ಅತ್ಯಂತ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ

ಮಾಡಿದ್ದಾನೆ ಮತ್ತು ನನ್ನ ಗಂಡನು ಚಾಲನೆ ಮಾಡುತ್ತಿದ್ದಂತಹ ಕೆಎ**-03-** ಹೆಚ್ ಇ**-6266** ಸಂಖ್ಯೆಯ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆಸಿದ್ದಾನೆ ಎಂಬುದಾಗಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಮತ್ತು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

12) ತಮ್ಮ ಜೀವಿತ ಕಾಲದಲ್ಲಿ ನನ್ನ ಗಂಡನು ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡುತ್ತಿದ್ದರು. ನನ್ನ ಗಂಡನ ಆದಾಯಕ್ಕೆ ಸಂಬಂಧಪಟ್ಟಂತೆ ನಾನು ಹಾಜರುಪಡಿಸಿರುವಂತಹ ದಾಖಲೆಗಳಲ್ಲಿ ಅಂದರೆ ನಿ.ಪಿ.**14** ರಿಂದ ನಿ.ಪಿ.**20** ದಾಖಲೆಗಳಲ್ಲಿ ಸಂಬಂಧಪಟ್ಟಂತಹ ಅಧಿಕಾರಿಗಳ ಸಹಿ ಇರುವುದಿಲ್ಲ ಎಂದರೆ ಆ ದಾಖಲೆಗಳನ್ನು ನನ್ನ ಗಂಡನು ಮನೆಯಲ್ಲಿ ಇಟ್ಟಿದ್ದರು, ಅವುಗಳನ್ನು ತಂದು ನಾನು ಹಾಜರುಪಡಿಸಿದ್ದೇನೆ, ಉಳಿದ ವಿಷಯಗಳು ನನಗೆ ತಿಳಿದಿರುವುದಿಲ್ಲ.

13) ಸದರಿ ದಾಖಲೆಗಳನ್ನು ಅಂದರೆ ನಿ.ಪಿ.**14** ರಿಂದ ನಿ.ಪಿ.**20** ಎಂದು ಗುರುತು ಆಗಿರುವ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸುವ ಉದ್ದೇಶದಿಂದ ದಿಃ **30.09.2025** ರಂದು ನಾನು ಪಡೆದುಕೊಂಡಿದ್ದೇನೆ ಎಂದರೆ ಸುಳ್ಳು.

14) ನಿ.ಪಿ.**1** ರಿಂದ ನಿ.ಪಿ.**21** ಎಂದು ಗುರುತು ಆಗಿರುವ ದಾಖಲೆಗಳನ್ನು

ಕಂಪೆನಿಯಿಂದ ಅಂದರೆ ನನ್ನ ಗಂಡನು ಕೆಲಸ ಮಾಡುತ್ತಿದ್ದಂತಹ ಕಂಪೆನಿಯಿಂದ ಪಡೆದುಕೊಂಡಿದ್ದೇನೆ. ಸದರಿ ಕಂಪೆನಿಯ ಅಧಿಕಾರಿಗಳನ್ನು ವಿಚಾರಣೆ ಮಾಡುತ್ತೇನೋ ಹೇಗೆ ಎಂದರೆ ಅವರುಗಳನ್ನು ಕೇಳಿ ನೋಡುತ್ತೇನೆ ಅವರು ಒಪ್ಪಿಕೊಂಡರೆ ಆ ಅಧಿಕಾರಿಗಳನ್ನು ವಿಚಾರಣೆ ಮಾಡುತ್ತೇನೆ.

15) ನಿ.ಪಿ.2 ದಾಖಲೆಯನ್ನು ನಾನು ಬೇರೆ ವ್ಯಕ್ತಿಯಿಂದ ಬರೆಸಿ ನಂತರ ಪೋಲಿಸರಿಗೆ ಕೊಟ್ಟಿದ್ದೇನೆ. ನಿ.ಪಿ.2 ರಲ್ಲಿ ಏನೇನು ಬರೆದಿದೆ ಎಂದು ನನಗೆ ತಿಳಿದಿದೆ.

16) ಮೃತದೇಹದ ಸಾಗಾಟಕ್ಕೆ ಮತ್ತು ಅಂತ್ಯಕ್ರಿಯೆಗೆ ಮತ್ತು ವೈಕುಂಠ ಸಮಾರಾಧನೆಗೆ 2 ಲಕ್ಷ ರೂಪಾಯಿಗಳು ಖರ್ಚು ಆಗಿದೆ ಎನ್ನುವ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ.

17) ನನ್ನ ಗಂಡನಿಗೆ ಒಂದು ತಿಂಗಳಿಗೆ 21 ಸಾವಿರ ರೂಪಾಯಿ ಸಂಬಳ ಬರುತ್ತಿತ್ತು ಎಂಬುದಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

18) ಯಾವ ರಸ್ತೆಯಲ್ಲಿ ಅಪಘಾತವು ಆಗಿದೆಯೋ ಸದರಿ ರಸ್ತೆಯಲ್ಲಿ

ಯಾವಾಗಲೂ ಬಹಳ ವಾಹನಗಳು ಓಡಾಡುತ್ತವೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ರಸ್ತೆ ವಿಭಜಕವು ಇದೆಯೋ ಇಲ್ಲವೋ ಎಂದರೆ ನನಗೆ ಗೊತ್ತಿಲ್ಲ.

19) ದ್ವಿಚಕ್ರ ವಾಹನವನ್ನು ಚಾಲನೆ ಮಾಡುತ್ತಿದ್ದಂತಹ ಸಮಯದಲ್ಲಿ ನನ್ನ ಗಂಡನು ತಮ್ಮ ವಾಹನದ ಮೇಲೆ ನಿಯಂತ್ರಣವನ್ನು ಕಳೆದುಕೊಂಡು ಆಯತಪ್ಪಿ ಬಿದ್ದು ಗಾಯಗೊಂಡಿದ್ದಾರೆ ಮತ್ತು ನನ್ನ ಗಂಡನು ಹೆಲ್ಮೆಟ್ ಹಾಕಿಕೊಂಡಿರಲಿಲ್ಲ ಮತ್ತು ಕೆಎ-**07**-ಇಜಿ-**6793** ಸಂಖ್ಯೆಯ ದ್ವಿಚಕ್ರ ವಾಹನದ ಚಾಲಕನ ತಪ್ಪಿನಿಂದ ಅಪಘಾತವು ಸಂಭವಿಸಿರುವುದಿಲ್ಲ ಎಂದರೆ ಸುಳ್ಳು.

20) ಹೆಚ್ಚಿನ ಪರಿಹಾರವನ್ನು ಪಡೆಯಬೇಕು ಎಂಬ ದುರುದ್ದೇಶದಿಂದ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

21) ಮರಣ ಹೊಂದುವ ಸಮಯದಲ್ಲಿ ನನ್ನ ಗಂಡನಿಗೆ **46** ವರ್ಷ ವಯಸ್ಸು ಆಗಿತ್ತು. ನನ್ನ ಗಂಡನ ವಯಸ್ಸಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸುಳ್ಳು.

**<u>ಮರು ವಿಚಾರಣೆ: ಇಲ್ಲ.</u>**
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.